ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

16

ಇಲಾಖೆ / ವಿಷಯ : DEPARTMENT / SUBJECT: ನೀರಾವರಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE 5/11/20

www.epaper.vijaykarnataka.com

# ಮಹದಾಯಿ ಯೋಜನೆ ಕುರಿತು ಹಾರಿಕೆ ಉತ್ತರ



**ಪಣಜಿ:** ಕರ್ನಾಟಕ-ಗೋವಾ ನಡುವಿನ ಸಂಘರ್ಷಕ್ಕೆ ಕಾರಣವಾಗಿರುವ ಮಹದಾಯಿ ನದಿ ತಿರುವು ಸೇರಿದಂತೆ ನಾಲ್ಕು ಪ್ರಮುಖ ಯೋಜನೆಗಳ ಅನುಮತಿ ವಿಚಾರದಲ್ಲಿ ಎದ್ದಿರುವ ವಿವಾದಕ್ಕೆ ನೇರ ಉತ್ತರ ನೀಡಲು ಕೇಂದ್ರ ಪರಿಸರ ಸಚಿವ ಪ್ರಕಾಶ್ ಜಾವಡೇಕರ್ ನಿರಾಕರಿಸಿದ್ದಾರೆ.

ನೂತನ ಕೃಷಿ ಕಾಯಿದೆಗಳ ಉತ್ತಮ ಅಂಶಗಳ ಬಗ್ಗೆ ಮನವರಿಕೆ ಮಾಡಿಕೊಡಲು ದೇಶಾದ್ಯಂತ ಸಚಿವರನ್ನು ಕಳಿಸಿಕೊಡಲು ಬಿಜೆಪಿ ನಿರ್ಧಾರ ಕೈಗೊಂಡಿದ್ದು, ಇದರ ಅಂಗವಾಗಿ ಜಾವಡೇಕರ್ ಭಾನುವಾರ ಪಣಜಿಯಲ್ಲಿ ಸುದ್ದಿಗೋಷ್ಠಿ ನಡೆಸಿದರು. ಈ ವೇಳೆ, ವರದಿಗಾರರು ಪರಿಸರಕ್ಕೆ ಸಂಬಂಧಿಸಿದ ಪ್ರಮುಖ ಯೋಜನೆಗಳ ಕುರಿತು ಸಚಿವರ ಗಮನ ಸೆಳೆದರು. ಜೀವ ವೈವಿಧ್ಯದ ದಟ್ಟಾರಣ್ಯದಲ್ಲಿ ಸಾಗುವ ರೈಲ್ವೆ ಹೆದ್ದಾರಿ ಮತ್ತು ಹೊಸ ವಿದ್ಯುತ್ ಲೈನ್ ಅಳವಡಿಕೆ ಕಾಮಗಾರಿಗಳಿಗೆ ಲಾಕ್‌ಡೌನ್ ಅವಧಿಯಲ್ಲಿ ಕೇಂದ್ರ ಪರಿಸರ ಸಚಿವಾಲಯ ತರಾತುರಿಯಲ್ಲಿ ಅನುಮೋದನೆ ನೀಡಿದ್ದು ಯಾಕೆ ಎಂದು ಪ್ರಶ್ನಿಸಿದರು. ಇದಕ್ಕೆ ತಾಳ್ಮೆಯಿಂದಲೇ ಉತ್ತರಿಸಿದ ಸಚಿವರು, ''ಈ ಯೋಜನೆಗಳಿಂದ ಪರಿಸರಕ್ಕೆ ಅಪಾಯವಾಗುತ್ತದೆ ಎಂದು ಮಾಹಿತಿಯೊಳಗೊಂಡ ಮನವಿ ಸಲ್ಲಿಸಿದರೆ ಪರಿಶೀಲಿಸಲಾಗುವುದು,'' ಎಂದು ತಿಳಿಸಿದರು.

ಮಹದಾಯಿ ತಿರುವು ಯೋಜನೆಗೆ ನೀಡಿದ್ದ ಅನುಮತಿ ವಿಷಯದಲ್ಲೂ ಸಚಿವರನ್ನು ಪ್ರಶ್ನಿಸಲಾಯಿತು. ''ಇದಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ನಿಮಗೆ ಸ್ಪಷ್ಟನೆ ನೀಡುತ್ತಾರೆ. ಸದ್ಯ ಈ ವಿಷಯ ಕೋರ್ಟ್‌ನಲ್ಲಿದೆ. ಹೆಚ್ಚಿನ ಬೆಳವಣಿಗೆಗಳೇನೂ ಘಟಿಸಿಲ್ಲ'' ಎಂದು ಜಾರಿಕೊಂಡರು. ಕರ್ನಾಟಕದಲ್ಲಿ ಈ ಹಿಂದೆ ನಡೆದ ಉಪ ಚುನಾವಣೆ ಸಂದರ್ಭದಲ್ಲಿ ಮಹದಾಯಿ ಯೋಜನೆಗೆ ಪರಿಸರ ಸಚಿವಾಲಯ ಗ್ರೀನ್ ಸಿಗ್ನಲ್ ನೀಡಿತ್ತು.